ಆಫ್ಘನ್, ತುರ್ಕಮೇನಿಸ್ತಾನ್ ಥರದ ಪ್ರದೇಶದವರು ಕೂಡ ಕಕೇಷಿಯನ್ನರೇ. ಕಕೇಷಿಯನ್ ಬರ್ನಿಂಗ್ ಬ್ಲೂ ಐ ಇರುವುದು ಕುರ್ದಿಶ್, ಯೆಜಿಡಿ, ಆಫ್ಘನ್ ಥರದವರಿಗೆ. ಕಾಶ್ಮೀರದವರು ಇದ್ದಾರಲ್ಲ, ಅವರು ಪಕ್ಕಾ ಆರ್ಯನ್ಸ್. ಕೊಂಕಣಿಯ ಕೆಲವು ಮೇಲ್ಜಾತಿಯ ಪಂಗಡಗಳು, ಕೊಡಗಿನ ಕೆಲವು ಪಂಗಡಗಳು ಬಿಟ್ಟರೆ ದಕ್ಷಿಣ ಭಾರತದಲ್ಲಿರುವವರೆಲ್ಲ – ಬ್ರಾಹ್ಮಣರೂ ಸೇರಿದಂತೆ ಯಾರೂ – ಕಾಕಸಾಯಿಡ್ ಅಲ್ಲ. ದುರಂತವೇನೆಂದರೆ, ತಮ್ಮ ಪೂರ್ವಿಕ ಧರ್ಮ ಸಂಸ್ಕೃತಿಗಳನ್ನು ಮರೆತು ಕಕೇಷಿಯನ್ ಧರ್ಮ ಸಂಸ್ಕೃತಿಗಳ ಬೆಂಬಲಿಗರಾಗಿ ನಿಂತಿರುವವರು ನಾನ್ ಕಕೇಷಿಯನ್ನರೇ. ಇವತ್ತಿಗೂ ಪ್ರಾರ್ಥನೆ ಮಾಡುವಾಗ ಯಹೂದಿಗಳು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ತಲೆವಸ್ತ್ರ ಧರಿಸುತ್ತಾರೆ. ಅವರದ್ದು ಯಜನ ಸಂಸ್ಕೃತಿ. ನಮ್ಮದು ಪೂಜನ ಸಂಸ್ಕೃತಿ. ವಾಸ್ತವವಾಗಿ 'ದೇವ' ಕಲ್ಪನೆಯೇ ದಕ್ಷಿಣ ಭಾರತದಲ್ಲಿ ಇರಲಿಲ್ಲ. 'ದೇವ' ಎನ್ನುವ ಪದವೇ ಪಾರ್ಸಿ ಮೂಲದ್ದು. ದ್ರಾವಿಡರಲ್ಲಿ ಇದ್ದದ್ದು ಪೂರ್ವಿಕ ಪಿತೃಗಳ ಆರಾಧನೆ. ಅಂದರೆ ಕೋ ಸಂಸ್ಕೃತಿ. ಕೋ ಅಂದರೆ ಪೂರ್ವಿಕ ಪಿತೃ ಎಂದರ್ಥ. ಅದರ ಮೂಲವೇ ಲಿಂಗ ಪೂಜೆ.

◆ ನೀವು ಇತಿಹಾಸದ ಗಂಭೀರ ವಿದ್ಯಾರ್ಥಿಯಾಗಿ, ಸಂಸ್ಕೃತಿ ಶೋಧಕರಾಗಿ, ಹೋರಾಟಗಾರರಾಗಿ ಹತ್ತಾರು ಚಟುವಟಿಕೆಗಳಲ್ಲಿ ತೊಡಗಿದವರು. ಇವುಗಳ ನಡುವೆ ನಿಮಗೆ ಕಾವ್ಯದ ಸಂಸ್ಕಾರ ದೊರೆತದ್ದು ಹೇಗೆ? ದಲಿತ ಚಳವಳಿಯಲ್ಲಿದ್ದೂ ನಿಮ್ಮ ಕಾವ್ಯ ಧೋರಣೆ ಭಿನ್ನವಾಗಿದ್ದು ಹೇಗೆ?

ನನಗೆ ಕಾವ್ಯದ ಮೊದಲ ಪಾಠ ಸಿಕ್ಕಿದ್ದೇ ಮೇಷ್ಟ್ರು ಚಂದ್ರಮೋಹನ್ ಅವರಿಂದ. ಮತ್ತು ಸ್ವಲ್ಪ ಮಟ್ಟಿಗೆ ಸಣ್ಣಗುಡ್ಡಯ್ಯ ಅವರಿಂದ. ಅವರಿಬ್ಬರೂ ಜಗತ್ತಿನ ಶ್ರೇಷ್ಠ ಕವಿಗಳನ್ನು ಪರಿಚಯಿಸಿದರು. ಕಾವ್ಯದ ಪ್ರವೇಶಿಕೆ ಹೇಗಿರಬೇಕು ಮತ್ತು ಕಾವ್ಯವನ್ನು ಹೇಗೆ ಓದಬೇಕು, ಹೇಗೆ ಗ್ರಹಿಸಬೇಕು ಎನ್ನುವುದರ ಸಾಧ್ಯತೆಗಳನ್ನು ತೋರಿಸಿಕೊಟ್ಟದ್ದೇ ಚಂದ್ರಮೋಹನ್. ಅದಾದ ನಂತರವೂ ನನಗೆ ಕಾವ್ಯದಲ್ಲಿ ಗಂಭೀರವಾಗಿ ತೊಡಗಿಸಿಕೊಳ್ಳಬೇಕು ಎಂದೇನೂ ಇರಲಿಲ್ಲ. ಏನಾಗಿತ್ತು ಅಂದರೆ, ನಮ್ಮ ಸುತ್ತಲಿನ ಅನೇಕರ ಕವನಗಳನ್ನು ಓದುತ್ತಿದ್ದ ನನಗೆ ಇದು ಕಾವ್ಯವೇ ಆಗಿಲ್ಲವಲ್ಲ ಎಂದು ಅನಿಸಲಾರಂಭಿಸಿತು. ನೀವು ಯಾವುದೋ ಒಂದು ವಿಚಾರವನ್ನು ತುಂಬಾ ಸರಳವಾಗಿ, ನೇರವಾಗಿ ಓದುಗನಿಗೆ ಮುಟ್ಟಿಸಬೇಕು ಅನ್ನೋ ರೀತಿಯಲ್ಲಿ ಪದಗಳ ಕೆಳಗೆ ಪದಗಳನ್ನು ಜೋಡಿಸಿ ಬರೆದರೆ ಅದು ಕವಿತೆಯಾಗುವುದಿಲ್ಲ. ಹೀಗೆ ಅನೇಕರ ಕಾವ್ಯದ ಬಗ್ಗೆ ನನಗೆ ಅಸಮಾಧಾನವುಂಟಾಗಿ ನಾನೇ ಯಾಕೆ ಕವಿತೆ ಬರೆಯಬಾರದು ಅಂತಾ ಬರೆಯತೊಡಗಿದೆ. ಕಾವ್ಯ ಯಾವತ್ತೂ ಘೋಷಣೆ ಆಗಬಾರದು. ಸ್ಲೋಗನೀರಿಂಗ್ ಆಗಿ ಬರೆಯುವುದಾದರೆ ನೀವು ಕಾವ್ಯವನ್ನೇ ಯಾಕೆ ಆಯ್ಕೆ ಮಾಡಿಕೊಳ್ಳಬೇಕು, ಬೇರೆ ಪ್ರಕಾರಗಳು ಇವೆಯಲ್ಲ. ಹಾಗಂತ ಕವಿಯಾದವನೊಬ್ಬ ತನ್ನ ವರ್ತಮಾನದ ತಲ್ಲಣಗಳಿಗೆ ಕುರುಡಾಗಿರಬೇಕಾದ ಅಗತ್ಯವೂ ಇಲ್ಲ. ನಾನೇನು ಮಾಡಿದೆ ಎಂದು ಹೇಳುವುದಾದರೆ, ಕಾವ್ಯದಲ್ಲಿ ಸಾಂಸ್ಕೃತಿಕ ಹಾಗೂ ರಾಜಕೀಯ ನೆಲೆಯಿಂದ ಬದುಕನ್ನು ಗ್ರಹಿಸುವ ಪ್ರಯತ್ನ ಮಾಡಿದೆ. ಕಾವ್ಯ ರಚನೆಗೆ ನನಗೆ ಪ್ರೇರಣೆಯೊದಗಿಸಿದ್ದು ಜನಪದ ಸಾಹಿತ್ಯ, ತತ್ವಪದಕಾರರು ಹಾಗೂ ವಚನಕಾರರು. ನಮ್ಮಲ್ಲಿ ಏನಾಗಿತ್ತು ಅಂದರೆ, ರೈತ, ದಲಿತ, ಮಹಿಳಾ ಚಳವಳಿಗಳು ಸಂಸ್ಕೃತಿಯ ಸಂಗತಿಗಳನ್ನು ಅಂಚಿಗೆ ತಳ್ಳಿ ಬರೀ ಸಾಮಾಜಿಕ ಹಾಗೂ ರಾಜಕೀಯವಾದಂಥ ಹೆದ್ದಾರಿಯನ್ನು ಹುಡುಕಿಕೊಂಡಿದ್ದವು. ಬಂಡಾಯ ಕೂಡ ಅದೇ ಜಾಡಿನಲ್ಲಿ ಹೋಗುತ್ತಾ ಇತ್ತು. ಹಾಗಾಗಿ ಸಂಸ್ಕೃತಿ ಬೇರಿನ ನನ್ನ ಕಾವ್ಯದಲ್ಲಿ ಅವರೆಲ್ಲರಿಗೂ ಪ್ರತಿಭಟನೆ ಇಲ್ಲ ಅಂತ ಸಹಜವಾಗಿಯೇ ಅನ್ನಿಸಿತು. ಆದರೆ ಹಾಗೆ ಹೊರಟಂಥ ಎಲ್ಲ ಚಳವಳಿಗಳೂ ಮುಗ್ಗರಿಸಿ ಬಿದ್ದಿರುವುದನ್ನು ನಾವು ಕಂಡಿದ್ದೇವೆ. ಜನಕ್ಕೆ ಮುಖ್ಯವಾಗುವುದು ಸಂಸ್ಕೃತಿ